## ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 22.04.2022ರಂದು ಪೂರ್ವಾಹ್ನ ಗಂಟೆ 10:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2022ನೇ ಸಾಲಿನ ತೃತೀಯ ವಿಶೇಷ ಸಭೆ (ಘಟಿಕೋತ್ಸವ)ಯ ನಡವಳಿಗಳು.**

**ಉಪಸ್ಥಿತರು:**

| ಕ್ರ. ಸಂ. | | | ಸಹಿ |
|---|---|---|---|
| 1. | ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ<br>ಕುಲಪತಿಗಳು | ಅಧ್ಯಕ್ಷರು | |
| 2. | ಶ್ರೀ ಶ್ರೀಧರ ಬಾಬು ಎ.ಜಿ.,<br>ಜಂಟಿ ನಿರ್ದೇಶಕರು,<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 3. | ಪ್ರೊ. ಕರುಣಾಕರ್ ಎ. ಕೋಟೆಗಾರ್ | ಸದಸ್ಯರು | |
| 4. | ಶ್ರೀ ರವಿಚಂದ್ರ ಪಿ.ಎಂ. | ಸದಸ್ಯರು | |
| 5. | ಡಾ. ಜೆರಾಲ್ಡ್ ಸಂತೋಷ್ ಡಿ'ಸೋಜ,<br>ಡೀನರು | ಸದಸ್ಯರು | |
| 6. | ಫಾ. ಅಲ್ವಿನ್ ಸೆರವೋ | ಸದಸ್ಯರು | |
| 7. | ಡಾ. ಶಂಕರ ಭಟ್ ಪಿ. | ಸದಸ್ಯರು | |
| 8. | ಶ್ರೀ ಕೆ. ರಮೇಶ | ಸದಸ್ಯರು | |
| 9. | ಶ್ರೀ ರವೀಂದ್ರನಾಥ ರೈ | ಸದಸ್ಯರು | |
| 10. | ಡಾ. ಎಂ. ಎಸ್. ತಳವಾರ | ಸದಸ್ಯರು | |
| 11. | ಶ್ರೀ ಮೋಹನ್ ಪಡಿವಾಳ್ | ಸದಸ್ಯರು | |
| 12. | ಡಾ. ಎ. ಪಾರ್ವತಿ ಅಪ್ಪಯ್ಯ | ಸದಸ್ಯರು | |
| 13. | ಪ್ರೊ. ವಿಶ್ವನಾಥ್. ಪ್ರಾಧ್ಯಾಪಕರು | ಸದಸ್ಯರು | |
| 14. | ಡಾ. ಸಿಪ್ರಿಯನ್ ಮೊಂತೇರೋ<br>ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ<br>(ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 15. | ಪ್ರೊ. ಪಿ. ಎಲ್. ಧರ್ಮ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು | |
| 16. | ಪ್ರೊ. ವೈ. ಮುನಿರಾಜು<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ<br>ಆಹ್ವಾನಿತರು | |
| 17. | ಪ್ರೊ. ಕಿಶೋರ್ ಕುಮಾರ್ ಸಿ. ಕೆ.<br>ಕುಲಸಚಿವರು (ಆಡಳಿತ) | ಸದಸ್ಯ<br>ಕಾರ್ಯದರ್ಶಿ | |

### ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

### ಪ್ರಾಸ್ತಾವಿಕ

ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಈ ಕೆಳಗಿನ ವಿಷಯಗಳನ್ನು ಸಭೆಗೆ ತಿಳಿಸಿದರು.

1. ಮಂಗಳೂರು ವಿಶ್ವವಿದ್ಯಾನಿಲಯದ 40ನೇ ವಾರ್ಷಿಕ ಘಟಿಕೋತ್ಸವವನ್ನು ದಿನಾಂಕ 23.04.2022ರಂದು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹಮ್ಮಿಕೊಂಡಿರುವ ವಿಚಾರವನ್ನು ಸಭೆಗೆ ತಿಳಿಸುತ್ತಾ, ಘನತೆವೆತ್ತ ರಾಜ್ಯಪಾಲರು ಘಟಿಕೋತ್ಸವದ ಅಧ್ಯಕ್ಷತೆ ವಹಿಸಲಿರುವ ವಿಚಾರವನ್ನು ಸಭೆಗೆ ತಿಳಿಸಿದರು. ಮುಂದುವರಿದು, ಘಟಿಕೋತ್ಸವದ ತಯಾರಿ ಹಾಗೂ ಮುಖ್ಯ ಅತಿಥಿಗಳ ವಿವರಗಳನ್ನು ವಿಸ್ತಾರವಾಗಿ ಸಭೆಗೆ ತಿಳಿಸಿದರು.
2. ಘನತೆವೆತ್ತ ರಾಜ್ಯಪಾಲರ Minute to Minute Programme ನ್ನು ಸಭೆಗೆ ವಿವರಿಸಿದರು.
3. 40 ನೇ ಘಟಿಕೋತ್ಸವದ Minute to Minute Programme ನ್ನು ಸಭೆಗೆ ಮಂಡಿಸಿದರು.
4. ಸಿಂಡಿಕೇಟಿನ ಮೇ 2022ರ ಸಭೆಯನ್ನು ಬೆಂಗಳೂರಿನಲ್ಲಿ ನಡೆಸಲು ನಿರ್ಧರಿಸಿರುವ ವಿಚಾರವನ್ನು ಸಭೆಗೆ ತಿಳಿಸಿದರು.

## I. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ವಿಸ.3:1(2022)

**ವಿಷಯ:** 40ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದವಿ ಪಡೆಯಲು ಅರ್ಹತೆ ಹೊಂದಿರುವ ಅಭ್ಯರ್ಥಿಗಳ ಪಟ್ಟಿ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ವಿಸ.3:2(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 40ನೇ ವಾರ್ಷಿಕ ಘಟಿಕೋತ್ಸವದ ಸಂದರ್ಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯಲ್ಲಿ ನಮೂದಿಸಿರುವ ಮಹನೀಯರುಗಳಾದ ಶ್ರೀಮತಿ ಹೇಮಾವತಿ ವಿ. ಹೆಗ್ಗಡೆ (ಶಿಕ್ಷಣ ಮತ್ತು ಸಮಾಜ ಸೇವೆ), ಶ್ರೀ ಹರಿಕೃಷ್ಣ ಪುನರೂರು (ಸಮಾಜ ಸೇವೆ ಮತ್ತು ಸಾಹಿತ್ಯ) ಮತ್ತು ಶ್ರೀ ದೇವದಾಸ್ ಕಾಪಿಕಾಡ್ (ಕಲೆ (ತುಳು ನಾಟಕ/ಚಿತ್ರರಂಗ)) ಇವರುಗಳಿಗೆ ಮಂಗಳೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಇತರ ವಿಷಯಗಳು**

1. ಘನತೆವೆತ್ತ ರಾಜ್ಯಪಾಲರು 40 ನೇ ವಾರ್ಷಿಕ ಘಟಿಕೋತ್ಸವದಲ್ಲಿ ಅಧ್ಯಕ್ಷೀಯ ಭಾಷಣ ಮಾಡಲಿರುವುದರಿಂದ ಸದರಿ ಭಾಷಣವನ್ನು ಮುದ್ರಿಸಿ ಘಟಕೋತ್ಸವದಲ್ಲಿ ಹಂಚಲು ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.
2. Result analysis and progress ಬಗ್ಗೆ ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಮಾನ್ಯ ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
ಕುಲಸಚಿವರು

ಸಹಿ/-
ಕುಲಪತಿಗಳು.